**ವೈಯಕ್ತಿಕ ವಿದೇಶಿ ವಿನಿಮಯ ವ್ಯವಹಾರವನ್ನು ಸುಗಮಗೊಳಿಸುವುದು**
**ಭಾರತೀಯ ರಿಸರ್ವ್ ಬ್ಯಾಂಕು ತಾರಾಪುರ ಸಮಿತಿ ಶಿಫಾರಸುಗಳನ್ನು ಅನುಷ್ಠಾನಗೊಳಿಸುತ್ತದೆ**
**ಮೇ 25, 2004**

ವ್ಯಕ್ತಿಗತ ವಿದೇಶೀ ವಿನಿಮಯ-ವ್ಯವಹಾರಗಳು ರೂಪಾಯಿ ವ್ಯವಹಾರದಷ್ಟೇ ಸುಗಮವಾಗಿರುವಂತೆ ನೋಡಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕು ವಿವಿಧ ಕ್ರಮಗಳನ್ನು ಕೈಗೊಂಡಿದೆ. 2004ರ ಫೆಬ್ರುವರಿಯಲ್ಲಿ ಪ್ರಾರಂಭಿಸಿದ 25000 ಅಮೇರಿಕನ್ ಡಾಲರ್‌ವರೆಗಿನ ಮೊತ್ತದ ವೈಯಕ್ತಿಕ ಜಮೆಯ ಉದಾರೀಕೃತ ಯೋಜನೆ ಹಾಗೂ ರಿಯಾಯಿತಿ ದರದಲ್ಲಿ ಉದ್ಯೋಗಿಗಳಿಗೆ ಸ್ಟಾಕ್ ಆಯ್ಕೆ ನೀಡುವ ಬಗ್ಗೆ ಇರುವ ನಿರ್ಬಂಧಕ ಉಪಬಂಧವನ್ನು ತೆಗೆದುಹಾಕಿದ ಕ್ರಮಗಳೆರಡನ್ನೂ ಇದು ಒಳಗೊಳ್ಳುತ್ತದೆ. ಭಾರತೀಯ ರಿಸರ್ವ್ ಬ್ಯಾಂಕು, ವಿದೇಶಿ ವಿನಿಮಯ ವ್ಯವಸ್ಥಾಪನಾ ಅಧಿನಿಯಮ, 1999ನ್ನು ಕಾರ್ಯರೂಪಕ್ಕೆ ತರುವ ವಿಭಾಗದ ಹೆಸರನ್ನು ಎಂದರೆ ವಿನಿಮಯ ನಿಯಂತ್ರಣಾ ವಿಭಾಗ ಎಂದಿದ್ದುದನ್ನು ವಿದೇಶಿ ವಿನಿಮಯ ವಿಭಾಗ ಎಂದು ಬದಲಿಸಿ ಕನಿಷ್ಠ ಕಾರ್ಯತಂತ್ರ ಕಾರ್ಯಪಡೆ ಎಂಬಂತೆ ಅದಕ್ಕೆ ಪುನಶ್ಚೇತನ ನೀಡಿದೆ. ತಮ್ಮ ಅಧಿಕೃತ ವ್ಯಾಪಾರಿ ಶಾಖೆಗಳಲ್ಲಿ ಗ್ರಾಹಕರೊಂದಿಗೆ ನೇರವಾಗಿ ವ್ಯವಹರಿಸಬೇಕಾದ ಸ್ಥಾನಗಳಲ್ಲಿ ನುರಿತ ಸಿಬ್ಬಂದಿಯನ್ನು ನೇಮಿಸುವಂತೆ ಕ್ರಮ ಕೈಗೊಳ್ಳಲು ರಿಸರ್ವ್ ಬ್ಯಾಂಕು ಬ್ಯಾಂಕುಗಳಿಗೆ ಸೂಚಿಸಿದೆ.

2003ರ ನವೆಂಬರ್‌ನಲ್ಲಿ ಕೈಗೊಳ್ಳಲಾದ ಹಣಕಾಸು ಹಾಗೂ ಉದ್ದರಿ ನೀತಿಯ ಮಧ್ಯಾವಧಿ ಪುನರಾವಲೋಕನದ ಅನುಸರಣಾ ಕ್ರಮ ಎಂಬಂತೆ ಭಾರತೀಯ ರಿಸರ್ವ್ ಬ್ಯಾಂಕು 'ಸಾರ್ವಜನಿಕ ಸೇವೆಗಳ ಕಾರ್ಯವಿಧಾನ ಹಾಗೂ ಕಾರ್ಯನಿರ್ವಹಣೆಯ ಪರಿಶೋಧನಾ ಸಮಿತಿ ರಚಿಸಿದನ್ನು ಇಲ್ಲಿ ಸ್ಮರಿಸಬಹುದಾಗಿದೆ (ಅಧ್ಯಕ್ಷರು: ಶ್ರೀ. ಎಸ್.ಎಸ್. ತಾರಾಪುರ್, ವಿಶ್ರಾಂತ ಡೆಪ್ಯುಟಿ ಗವರ್ನರ್, ಭಾರತೀಯ ರಿಸರ್ವ್ ಬ್ಯಾಂಕು). ತಾರಾಪುರ ಸಮಿತಿಯು, ವ್ಯಕ್ತಿಗತ ಗ್ರಾಹಕ ವ್ಯವಹಾರದ ಮೇಲೆ ಪರಿಣಾಮ ಬೀರುವ ನಾಲ್ಕು ವಿಭಾಗಗಳಡಿಯಲ್ಲಿನ ಎಂದರೆ ವಿದೇಶೀ ವಿನಿಮಯ, ಸರ್ಕಾರದ ವ್ಯವಹಾರಗಳು, ಬ್ಯಾಂಕಿಂಗ್ ಕಾರ್ಯಾಚರಣೆ ಹಾಗೂ ಹಣಕಾಸು ನಿರ್ವಹಣೆ ಕುರಿತಂತೆ ರಿಸರ್ವ್ ಬ್ಯಾಂಕಿನ ಕಾರ್ಯವಿಧಾನ ಹಾಗೂ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿತು. ತಾರಾಪುರ ಸಮಿತಿಯು 2004ರ ಜನವರಿಯಿಂದ ಏಪ್ರಿಲ್ ನಡುವಣ ಅವಧಿಯಲ್ಲಿ ವರದಿ ಸಲ್ಲಿಸಿತು. ಭಾರತೀಯ ರಿಸರ್ವ್ ಬ್ಯಾಂಕು ತಾರಾಪುರ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿ, ಪ್ರತಿಯೊಂದು ಕ್ಷೇತ್ರಗಳನ್ನು ಕುರಿತ ಶಿಫಾರಸುಗಳ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದೆ. ಪ್ರತಿಯೊಂದು ಕ್ಷೇತ್ರಗಳ ಸಂಬಂಧದಲ್ಲಿ ರಿಸರ್ವ್ ಬ್ಯಾಂಕು ಕೈಗೊಂಡಿರುವ ಕ್ರಮವನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕು, ಸಾರ್ವಜನಿಕ ಸೇವೆಗಳ ಕಾರ್ಯವಿಧಾನ ಹಾಗೂ ಕಾರ್ಯನಿರ್ವಹಣಾ ಪರಿಶೋಧನೆಯ ಆಂತರಿಕ ತಾತ್ಕಾಲಿಕ ಸಮಿತಿಗಳ ಮೂಲಕ ಬ್ಯಾಂಕುಗಳಿಗೆ ತಾರಾಪುರ ಸಮಿತಿಯ ಶಿಫಾರಸುಗಳನ್ನು ಅನುಸರಣಾ ಕ್ರಮಕ್ಕಾಗಿ ಕಳುಹಿಸಿದೆ. ಈ ಕ್ಷೇತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ವೈಯಕ್ತಿಕ ವ್ಯವಹಾರಗಳ ಸಂಬಂಧದಲ್ಲಿನ ಕಾರ್ಯವಿಧಾನ ಹಾಗೂ ಪದ್ಧತಿಗಳನ್ನು ಸರಳಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಾತ್ಕಾಲಿಕ ಸಮಿತಿಗಳನ್ನು ಒತ್ತಾಯಿಸಿದೆ. ಗ್ರಾಹಕರೊಂದಿಗೆ ನೇರ ಸಂಪರ್ಕ ಬರುವ ಸ್ಥಾನಗಳಲ್ಲಿ ತರಬೇತಿ ಪಡೆದ ಹಾಗೂ ವಿಷಯದ ಅರಿವು ಉಳ್ಳ ಸಿಬ್ಬಂದಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕೆಂದು ಬ್ಯಾಂಕ್ ಮಟ್ಟದಲ್ಲಿನ ತಾತ್ಕಾಲಿಕ ಸಮಿತಿಗಳಿಗೆ ಸೂಚನೆಯನ್ನು ನೀಡಿದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1377